# ಪದ್ಯ–೭ – ಜೀವನದರ್ಶನ

**ಕೃತಿಕಾರರ ಪರಿಚಯ**

**ಶ್ರೀಪಾದರಾಜರು**

ಇವರ ಕಾಲ ಕ್ರಿ.ಶ.ಸುಮಾರು ೧೪೦೪ ರಿಂದ ೧೫೦೨ . ಇವರು ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಗ್ರಾಮದವರು. ಇವರ ೮೨ ಕೀರ್ತನೆಗಳು , ೩ ಸುಳಾದಿಗಳು ,೧೫ ಉಗಾಭೋಗಗಳು ,೧ ದಂಡಕವು ಲಭ್ಯವಾಗಿವೆ . ಇವರ ಅಂಕಿತ ಶ್ರೀರಂಗ ವಿಠಲ .

**ಗೋಪಾಲದಾಸರು**

ಇವರ ಕಾಲ ಕ್ರಿ.ಶ. ೧೭೨೧ . ಇವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರುಕಲ್ಲಿನಲ್ಲಿ ಜನಿಸದರು. ಇವರ ಅಂಕಿತನಾಮ ಗೋಪಾಲ ವಿಠಲ .೯೬ ಕೀರ್ತನೆಗಳು ,೭೦ ಸುಳಾದಿಗಳು ,೨೧ ಉಗಾಭೋಗಗಳು ಉಪಲಬ್ಧವಾಗಿವೆ.

**ವಿಜಯದಾಸರು**

ಇವರ ಕಾಲ ಕ್ರಿ.ಶ. ಸುಮಾರು ೧೬೮೨ ರಿಂದ ೧೭೫೫ .ಇವರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೀಕನ ಪರಿವಿಯಲ್ಲಿ ಜನಿಸಿದರು. ಇವರ ಅಂಕಿತನಾಮ ವಿಜಯವಿಠಲ .

## ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ

೧. ವ್ಯಕ್ತಿಯು ಮುಕ್ತಿ ಪಡೆಯಲು ಏನು ಮಾಡಬೇಕು ?

ಉ: ವ್ಯಕ್ತಿಯು ಮುಕ್ತಿ ಪಡೆಯಲು ಅವನು ಭಕ್ತಿ ,ವಿರಕ್ತಿ ,ಮತ್ತು ಶಕ್ತಿಯನ್ನು ಹೊಂದಿರಬೇಕು.

೨. ಸುತರಲ್ಲಿ ಎಂಥಹ ಗುಣವಿರಬೇಕು ?

ಉ: ಸುತರಲ್ಲಿ ಒಳ್ಳೆಯ ಗುಣಗಳಿರಬೇಕು.

೩. ದೇವನು ಯಾರ ಪಾತಕಗಳನ್ನು ಪರಿಹರಿಸುವನು ?

ಉ: ದೇವನು ಯಾರು ತನ್ನನ್ನು ಪ್ರೀತಿಯಿಂದ ಸ್ಮರಿಸುವವರ ಪಾತಕಗಳನ್ನು ಪರಿಹರಿಸುವನು.

೪. ದೇವನು ಯಾವ ಮಂತ್ರಕ್ಕೆ ಒಲಿಯುವನು ?

ಉ. ದೇವನು ಬಕುತಿ ಮಂತ್ರಕ್ಕೆ ಒಲಿಯುವನು.

೫. ಸದಾ ಹೃದಯದಲ್ಲಿ ವಾಸಮಾಡುವವನು ಯಾರು ?

ಉ: ಸದಾ ಹೃದಯದಲ್ಲಿ ವಾಸ ಮಾಡುವವನು ಶ್ರೀಹರಿ .

## ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು ?

ಉ: ಮುಕ್ತಿಯನ್ನು ಪಡೆಯಲು ಭಕ್ತನಲ್ಲಿ ನಿಜವಾದ ಭಕ್ತಿ ಇರಬೇಕು. ಅವನು ವಿರಕ್ತಿಯನ್ನು ಹೊಂದಿರಬೇಕು. ಯಾವುದೇ ವಸ್ತುವಿನ ಅಥವಾ ವಿಷಯದ ಬಗ್ಗೆ ಅತಿಯಾದ ವ್ಯಾಮೋಹ ಹೊಂದಿರಬಾರದು ,ಆಸೆ ಆಮಿಷಗಳಿಗೆ ಒಳಗಾಗದೇ ವೈರಾಗ್ಯ ಹೊಂದಿರಬೇಕು. . ಸರ್ವ ವಿಧವಾದ ಶಕ್ತಿಯನ್ನು ಹೊಂದಿರಬೇಕು.

೨. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸದರೆಂದು ಗೋಪಾಲದಾಸರು ಹೇಳಿದ್ದಾರೆ ?

ಉ: ದೇವರು ಭಕ್ತ ಪರಾಧೀನ .ಭಕ್ತರು ಅಚಲವಾದ ದೃಢ ಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ದೇವರು ಯಾರು ತನ್ನನ್ನು ಪ್ರೀತಿಯಿಂದ ,ವಿಶ್ವಾಸದಿಂದ ಭಕ್ತಿಯಿಂದ ಸ್ಮರಿಸುವರೋ ಅಂತವರ ಪಾತಕಗಳನ್ನು ಪರಿಹರಿಸುವನು. ಅಕ್ರೂರನಿಗೆ ಪ್ರಿಯನಾದವನು,ಶಂಖಚಕ್ರವನ್ನು ಧರಿಸಿದವನು. ಮೊಸಳೆಯ ಬಾಯಿಂದ ಭಕ್ತರನ್ನು ಕಾಪಾಡಿದವನು, ಅಜಮಿಳನನ್ನು ಸಲಹಿದವನು, ಭಜಿಸುವವರ ಕೈ ಬಿಡದವನು, ಅನಾಥ ಬಾಂಧವನು , ಭಕ್ತರ ಮೊರೆಗೆ ಕ್ಷಣಮಾತ್ರದಲ್ಲಿ ಒದಗುವವನು ಎಂದು ಗೋಪಾಲದಾಸರು ದೇವರು ತನ್ನ ಭಕ್ತರನ್ನು ರಕ್ಷಿಸುವ ದೇವರ ಬಗೆಯನ್ನು ವಿವರಿಸಿದ್ದಾರೆ.

೩. ಮುಕ್ತರಾಗಲು ಏನು ಮಾಡಬೇಕೆಂದು ವಿಜಯದಾಸರು ಹೇಳಿದ್ದಾರೆ ?

ಉ: ಮಾನವ ಜನ್ಮದ ಸಾರ್ಥಕತೆ ಮುಕ್ತಿ ಗಳಿಸುವಲ್ಲಿ ಇದೆ. ಇಹಲೋಕದಿಂದ ಮುಕ್ತನಾಗಲು ಸದಾ ಹರಿ ನಾಮ ಸ್ಮರಣೆ ಮಾಡಬೇಕು .ಆನಂದದಿಂದ ದೇವರ ಸ್ಮರಣೆ ಮಾಡಬೇಕು. ಜ್ಞಾನವೆಂಬ ನವರತ್ನದ ಮಂಟಪದ ಮಧ್ಯದಲ್ಲಿ ಗಾನ ಲೋಲನ ಕೂರಿಸಿ ಧ್ಯಾನದಿಂದ ಭಜಿಸಬೇಕು. ಭಕ್ತಿರಸ ಹೊಂದಿರಬೇಕು. ಮುಕ್ತನಾಗಬೇಕೆಂಬ ಭಾವನೆ ಇರಬೇಕು. ದೇವರ ನಾಮ ಬಿಡದೆ ಭಜಿಸಬೇಕು ಎಂದು ವಿಜಯದಾಸರು ಹೇಳಿದ್ದಾರೆ.

ಐದು –ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಶ್ರೀಪಾದರಾಜರು ನೀಡಿರುವ ಜೀವನ ಸಂದೇಶ ತಿಳಿಸಿ.

ಉ: ಮುಕ್ತಿಯನ್ನು ಪಡೆಯಲು ಭಕ್ತನಲ್ಲಿ ನಿಜವಾದ ಭಕ್ತಿ ಇರಬೇಕು. ಅವನು ವಿರಕ್ತಿಯನ್ನು ಹೊಂದಿರಬೇಕು. ಯಾವುದೇ ವಸ್ತುವಿನ ಅಥವಾ ವಿಷಯದ ಬಗ್ಗೆ ಅತಿಯಾದ ವ್ಯಾಮೋಹ ಹೊಂದಿರಬಾರದು ,ಆಸೆ ಆಮಿಷಗಳಿಗೆ ಒಳಗಾಗದೇ ವೈರಾಗ್ಯ ಹೊಂದಿರಬೇಕು. . ಸರ್ವ ವಿಧವಾದ ಶಕ್ತಿಯನ್ನು ಹೊಂದಿರಬೇಕು. ಸತಿಯು ಅನುಕೂಲಳಾಗಿದ್ದು ,ಸುತನಲ್ಲಿ ಗುಣವಿದ್ದು ಭಕ್ತನು ಮತಿವಂತನಾಗಿದ್ದರೆ ,ಪರಸ್ಪರರಲ್ಲಿ ಒಮ್ಮತದ ಅಭಿಪ್ರಾಯವಿರಬೇಕು. ಜಪದ ಜಾಣ್ಮೆ ಅರಿತು ತಪದಲ್ಲಿ ನಿಯಮವನ್ನು ಭಕ್ತನು ಪಾಲಿಸಬೇಕು. ಸುಸಂಗವನ್ನು ಹೊಂದಿ ದುಸ್ಸಂಗದಿಂದ ಅವನು ದೂರವಿರಬೇಕು. ಭಗವಂತನನ್ನು ಬಿಡದೆ ಭಜಿಸಬೇಕು ಎಂಬುದಾಗಿ ಶ್ರೀಪಾದರಾಜರು ಜೀವನ ಸಂದೇಶ ನೀಡಿದ್ದಾರೆ.

೨. ಗೋಪಾಲದಾಸರು ದೇವರು ಭಕ್ತಪ್ರಿಯ ಎಂಬುದನ್ನು ಹೇಗೆ ವಿವರಿಸಿದ್ದಾರೆ ?

ಉ: ದೇವರು ಭಕ್ತ ಪರಾಧೀನ .ಭಕ್ತರು ಅಚಲವಾದ ದೃಢ ಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ದೇವರು ಯಾರು ತನ್ನನ್ನು ಪ್ರೀತಿಯಿಂದ ,ವಿಶ್ವಾಸದಿಂದ ಭಕ್ತಿಯಿಂದ ಸ್ಮರಿಸುವರೋ ಅಂತವರ ಪಾತಕಗಳನ್ನು ಪರಿಹರಿಸುವನು. ಅಕ್ರೂರನಿಗೆ ಪ್ರಿಯನಾದವನು,ಶಂಖಚಕ್ರವನ್ನು ಧರಿಸಿದವನು. ಮೊಸಳೆಯ ಬಾಯಿಂದ ಭಕ್ತರನ್ನು ಕಾಪಾಡಿದವನು, ಅಜಮಿಳನನ್ನು ಸಲಹಿದವನು, ಭಜಿಸುವವರ ಕೈ ಬಿಡದವನು, ಅನಾಥ ಬಾಂಧವನು , ಭಕ್ತರ ಮೊರೆಗೆ ಕ್ಷಣಮಾತ್ರದಲ್ಲಿ ಒದಗುವವನು ಎಂದು ಗೋಪಾಲದಾಸರು ದೇವರು ಭಕ್ತ ಪ್ರಿಯ ಎಂಬುದಾಗಿ ವಿವರಿಸಿದ್ದಾರೆ. ದೇವನು ಸಕಲ ಗುಣಗಳಿಂದ ಪೂರ್ಣನಾದವನೂ ,ಸಕಲ ದೋಷಗಳಿಂದ ಮುಕ್ತನಾದವನೂ ಆಗಿದ್ದಾನೆ. ಸಕಲ ಆನಂದ ಪಾತ್ರನಾಗಿದ್ದು ಭಕುತಿ ಮಂತ್ರಕ್ಕೆ ಒಲಿಯುವವನಾಗಿದ್ದಾನೆ. ಭಕ್ತರು ಹೃದಯಕಮಲದಲ್ಲಿಟ್ಟು ಆರಾಧಿಸಿದರೆವ ನಂಬಿ ಕೆಟ್ಟವರಿಲ್ಲ ಎಂಬ ಮಾತನ್ನು ಸತ್ಯಗೊಳಿಸುವಂತೆ ಕ್ಷಣಮಾತ್ರದಲ್ಲಿ ಭಕ್ತರಿಗೆ ಬಂದೊದಗುತ್ತಾನೆ ಎಂದು ಗೋಪಾಲದಾಸರು ದೇವರು ಭಕ್ತಪ್ರಿಯ ಎಂದು ವಿವರಿಸಿದ್ದಾರೆ.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. "ಸುಸಂಗ ಹಿಡಿಯಲೇ ಬೇಕು ದುಸ್ಸಂಗ ಬಿಡಬೇಕು ."

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಮಗ್ರಸಂಪುಟದಿಂದ ಆರಿಸಲಾದ ಶ್ರೀಪಾದರಾಜರ ಕೀರ್ತನೆಗಳಿಂದ ಆಯ್ದುಕೊಂಡ ಜೀವನ ದರ್ಶನ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಮುಕ್ತಿಯನ್ನು ಬಯಸುವ ಮಾನವನು ಸರ್ವಶಕ್ತನಾಗಿದ್ದು ಲೌಕಿಕ ಸುಖಭೋಗಗಳಲ್ಲಿ ವೈರಾಗ್ಯ ಹೊಂದಿದವನಾಗಿರಬೇಕು. ಅವನಲ್ಲಿ ಜಪದ ಜಾಣ್ಮೆಯ ಜೊತೆ ತಪದ ನಿಯಮ ಬೇಕು. ಅಲ್ಲದೇ ಒಳ್ಳೆಯ ಜನರ ಸಹವಾಸದಿಂದ ಕೂಡಿದವನಾಗಿರಬೇಕು ಎಂದು ಕೀರ್ತನೆಕಾರರು ಹೇಳಿದ್ದಾರೆ.

ಸ್ವಾರಸ್ಯ : ಮುಕ್ತಿ ಪಡೆಯಬಯಸುವವನು ಒಳ್ಳೆಯವರ ಸಹವಾಸದಲ್ಲಿದ್ದು ದುಷ್ಟರಿಂದ ದೂರವಿರಬೇಕು ಎಂದು ಕೀರ್ತನಕಾರರು ಹೇಳಿದ್ದಾರೆ.

೨. " ಅನಾದಿ ಮೊರೆಯ ಕೇಳಿ ಅನಿಮಿದೊಳು ಒದಗಿದಾತ "

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಮಗ್ರಸಂಪುಟದಿಂದ ಆರಿಸಲಾದ ಗೋಪಾಲದಾಸರ ಕೀರ್ತನೆಗಳಿಂದ ಆಯ್ದುಕೊಂಡ ಜೀವನ ದರ್ಶನ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ದೇವರು ಭಕ್ತ ಪರಾಧೀನ ,ಅನಾಥ ರಕ್ಷಕ . ಭಕ್ತರು ಅಚಲವಾದ ದೃಢಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ ಎಂದು ಹೇಳುವ ಸಂದರ್ಭದಲ್ಲಿ ಕೀರ್ತನಕಾರರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಭಗವಂತನನ್ನು ಹೃದಯಕಮಲದಲ್ಲಿಟ್ಟು ಆರಾಧಿಸಿದರೆ ,ಪ್ರೀತಿಯಿಂದ ಕರೆದರೆ ಕ್ಷಣಮಾತ್ರದಲ್ಲಿ ಬಂದೊದಗುವನು . ನಂಬಿ ಕೆಟ್ಟವರಿಲ್ಲ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩." ನಿನ್ನ ನಾಮ ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ "

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಮಗ್ರಸಂಪುಟದಿಂದ ಆರಿಸಲಾದ ವಿಜಯದಾಸರ ಕೀರ್ತನೆಗಳಿಂದ ಆಯ್ದುಕೊಂಡ ಜೀವನ ದರ್ಶನ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಮಾನವ ಜನ್ಮದ ಸಾರ್ಥಕತೆ ಮುಕ್ತಿಗಳಿಸುವಲ್ಲಿ ಇದೆ .ಇಹಲೋಕದಿಂದ ಮುಕ್ತಿ ಪಡೆಯಲು ಸದಾ ಹರಿಯ ನಾಮ ಸ್ಮರಣೆ ಬೇಕು ಎಂದು ಹೇಳುವಾಗ ಕೀರ್ತನಕಾರರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಅಚಲವಾದ ದೃಢ ಭಕ್ತಿಯಿಂದ ದೈವ ಸಾಕ್ಷಾತ್ಕಾರವಾಗುವುದು .ಭಕ್ತಿ –ಭಕ್ತ ಒಂದಾದಾಗ ಮಾತ್ರ ಮುಕ್ತಿ ಸಾಧ್ಯ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಶ್ರೀಪಾದರು : ಅಬ್ಬೂರು : : ಗೋಪಾಲದಾಸರು :––– ಮೊಸರುಕಲ್ಲು

೨. ಜ್ಞಾನವೆಂಬೋ : ನವರತ್ನ : : ಭಕ್ತಿರಸವೆಂಬೋ : ––– ಮುತ್ತುಮಾಣಿಕ್ಯ

೩. ಹೃದಯ : ಎದೆ : : ಜ್ಞಾನ : –– ಜಾನ

೪. ಗೋಪಾಲದಾಸರು : ಗೋಪಾಲವಿಠಲ : : ವಿಜಯದಾಸರು : ––– ವಿಜಯವಿಠಲ

೫. ಮೋದ : ಆನಂದ : : ರಮಣ : –– ಪತಿ

ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಸತಿ –ಪತ್ನಿ , ಹೆಂಡತಿ ನಕ್ರ–ಮೊಸಳೆ ರಮಣ – ಪತಿ ,ಗಂಡ ಪಾತಕ –ಪಾಪ , ಕೆಟ್ಟಕೆಲಸ

ಮೋದ –ಸಂತೋಷ ಅನಾಥ –ದಿಕ್ಕಿಲ್ಲದವನು

ಕೊಟ್ಟಿರುವ ಪದಗಳಿಗೆ ತದ್ಭವ ರೂಪ ಬರೆಯಿರಿ.

ಮುಕ್ತಿ –ಮುಕುತಿ ಹೃದಯ –ಎದೆ ಪಕ್ಷಿ–ಹಕ್ಕಿ ಹಗೆ–ಪಗೆ ಶ್ರೀ–ಸಿರಿ

ಮುಕ್ತ–ಮುಕುತ ಮಾಣಿಕ್ಯ –ಮಾಣಿಕ